**ಓ ಎಸ್ ನಂಃ 325-14**
**ಪಿ ಡಬ್ಲ್ಯೂ ಃ 2**

**ದಿಃ 24-02-2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ** 1 ರಿಂದ 3 ನೇ ಪ್ರತಿವಾದಿ ಪರ ಶ್ರೀ ಕೆ ಎಸ್ ಎನ್ **ವಕೀಲರಿಂದ**

7. ಈರಮ್ಮ ನನ್ನ ಕಕ್ಷಿದಾರರಲ್ಲ ಆದರೆ ಅವರು 1990 ನೇ ಇಸವಿಯಿಂದ ಪರಿಚಿತರು. ನನ್ನ ಕಕ್ಷಿದಾರರಾದ ವೇಣುಗೋಪಾಲ್ ರವರ ಜೊತೆ ಅವರು ಬರುತ್ತಿದ್ದರಿಂದ ನನಗೆ ಪರಿಚಯವಾಗಿದ್ದರು. ಆ ಸಮಯದಲ್ಲಿ ವೇಣುಗೋಪಾಲ್ ರವರು ಯಶವಂತಪುರದ ನಿವಾಸಿಯಾಗಿದ್ದರು. ಅವರು ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದರಿಂದ ಜಮೀನಿನ ಹಕ್ಕು ದಾಖಲೆಗಳ ಪರಿಶೀಲನೆ ನನ್ನಿಂದ ಮಾಡಿಸುತ್ತಿದ್ದರು. ಈ ವೀಲು ನಾಮೆ ಬಿಟ್ಟು ಬೇರೆ ಯಾವುದೇ ದಾಖಲೆಗಳು ಹಾಗೂ ದಾವೆಗಳು ಈರಮ್ಮನವರ ಪರವಾಗಿ ನಾನು ಮಾಡಿರುವುದಿಲ್ಲ.

8. ಆ ಸಮಯದಲ್ಲಿ ಈರಮ್ಮನವರು ಯಶವಂತಪುರದಲ್ಲಿದ್ದರು. ನಾನು ಅವರ ಮನೆಯನ್ನು ನೋಡಿರುವುದಿಲ್ಲ. ಆ ವೀಲ್ ನಾಮೆಯನ್ನು ತಯಾರಿಸುವ ಮುಂಚೆ ವೇಣುಗೋಪಾಲ್ ರವರ ಜೊತೆ ಅವರು ಎರಡು ಸಾರಿ ಬಂದು ಸಂವಾದ ಮಾಡಿದ್ದರು. ವಿಲ್‌ನ್ನು ದಿನಾಂಕಃ 18-06-1994 ರಂದು ಬರೆದುಕೊಟ್ಟಿರುವುದು. ಆದರೆ ಅದಕ್ಕಿಂತ ಮೊದಲು ಕರಡು ವಿಲ್ ನಾಮೆಯನ್ನು ತಯಾರಿಸಿಕೊಟ್ಟಿದ್ದೆ. ಸಾಕ್ಷಿ ಸ್ವತಃ ಆ ಕರಡನ್ನು ಅನುಮೋದಿಸಿರುವುದರಿಂದ ಆ ವಿಲ್ ತಯಾರಿಸಿಕೊಟ್ಟೆ ಎಂದು ನುಡಿಯುತ್ತಾರೆ. ಆ ವಿಲ್ ನಾಮೆಯನ್ನು ನನ್ನ ಕಛೇರಿಯಲ್ಲೇ ತಯಾರಿಸಿರುವುದು. ಅದರ ಛಾಪಾ ಕಾಗದವನ್ನು ಅವರೇ ಬರುವಾಗ ತಂದಿದ್ದರು.

9. ಛಾಪಾ ಕಾಗದದಲ್ಲಿ ದಿನಾಂಕಃ 18-06-1994 ರಂದು ಆ ವಿಲ್ ನಾಮೆಯನ್ನು ತಯಾರಿಸಿದ್ದೆ. ಅದನ್ನು ತಯಾರಿಸುವಾಗ ಸಾಯಂಕಾಲ 4-00 ಗಂಟೆ ಆಗಿರಬಹುದು. ಅದಕ್ಕೆ ಸಹಿಯನ್ನು ಮಧ್ಯಾಹ್ನ 3-4 ಗಂಟೆಯೊಳಗಡೆ ಮಾಡಿಸಿರುತ್ತೇನೆ. ಅದರಲ್ಲಿ ಚಿತ್ತುಗಳನ್ನು ಸರಿಪಡಿಸಿದ್ದೇನಾ ಎಂದು ನನಗೆ ಜ್ಞಾಪಕವಿಲ್ಲ. ಅದಕ್ಕೆ ನನ್ನ ಮುಂದೆ ಹೆಬ್ಬೆಟ್ಟು ಗುರುತು ಹಾಕಿರುತ್ತಾರೆ. ಆ ಹೆಬ್ಬೆಟ್ಟನ್ನು ನಾನೇ ಸ್ವತಃ ದೃಢೀಕರಿಸಿರುತ್ತೇನೆ. ನಾನು ನೋಂದಣಿ ಕಛೇರಿಗೆ ನೋಂದಣಿ ಮಾಡಿಸಲು ಮಧ್ಯಾಹ್ನ 1-00 ಗಂಟೆಗೆ ದಿನಾಂಕಃ 02-07-1994 ರಂದು ಹೋಗಿದ್ದೆ. ನನ್ನ ಜೊತೆ ಈರಮ್ಮ, ಎರಡು ಸಾಕ್ಷಿಗಳಾದ ವೇಣುಗೋಪಾಲ್ ಮತ್ತು ಸುಬ್ಬಾರಾವ್ ಹಾಗೂ ಚಂದ್ರಾಚಾರಿ ಎಂಬುವವರು ಬಂದಿದ್ದರು.

10. ಸದರಿ ಸಾಕ್ಷಿಗಳು ದಿನಾಂಕಃ 18-06-1994 ರಂದು ಆ ವಿಲ್ ನಾಮೆಗೆ ಸಹಿ ಮಾಡಿದ್ದರು. ಉಪ-

ನೋಂದಣಾಧಿಕಾರಿ ಕಛೇರಿಯಲ್ಲಿ ಆ ವಿಲ್‌ನಲ್ಲಿ ತಿದ್ದುಪಡಿ ಮಾಡಲಾಯಿತಾ ಎಂದರೆ ನನಗೆ ನೆನಪಿಲ್ಲ. ಯಾವುದೇ ಪತ್ರದಲ್ಲಿ ಚಿತ್ತುಗಳನ್ನು ತಿದ್ದುಪಡಿ ಮಾಡಿದಾಗ ಹಾಗೂ ಅದನ್ನು ನಾನೇ ನೋಂದಣಿ ಮಾಡಿಸುವಾಗ ಆ ಭಾಗದಲ್ಲಿ ಪಕ್ಷಗಾರರ ಸಹಿ ಮಾಡಿಸುತ್ತೇನೆ. ನಿಪಿ 86 ರಲ್ಲಿ ತಿದ್ದುಪಡಿ ಮಾಡಿದಾಗ ನಾನು ಈರಮ್ಮನವರ ಹೆಬ್ಬೆಟ್ಟು ಗುರುತು ಹಾಕಿಸಿಲ್ಲ ಎಂದರೆ ಸಾಕ್ಷಿ ನಾನು ಒಂದನೇ ಪುಟದ 12 ನೇ ಸಾಲಿನಲ್ಲಿ ಅಕ್ಷರ ಹೊಡೆದಿದೆ ಎಂದು ನಮೂದಿಸಿದ್ದೇನೆ ಎಂದು ನುಡಿಯುತ್ತಾರೆ.

11. ಸಾಕ್ಷಿಗಳು ನನ್ನ ಸಮಕ್ಷಮದಲ್ಲಿ ಸಹಿ ಮಾಡಿರುತ್ತಾರೆ. ಸಾಕ್ಷಿಗಳಿಗೆ ನಾನೇ ಪೆನ್ನು ಕೊಟ್ಟು ಒಂದೇ ಪೆನ್ನಿನಲ್ಲಿ ಸಹಿ ಮಾಡಿಸಿದ್ದೇನೆ ಅಥವಾ ಬೇರೆ ಬೇರೆ ಪೆನ್ನಿನಲ್ಲಿ ಸಹಿ ಮಾಡಿದ್ದಾರ ಎಂಬುದು ನೆನಪಿಲ್ಲ. ಈರಮ್ಮನವರ ಹೆಬ್ಬೆಟ್ಟನ್ನು ನಾನೇ ಗುರುತಿಸಿರುವುದು ಹಾಗೂ ದೃಢೀಕರಿಸಿರುವುದು. ಸದರಿ ವಿಲ್‌ನ್ನು ತಯಾರಿಸಲು ಈರಮ್ಮನವರ ಜೊತೆ ಮೇಲೆ ಹೇಳಿದ ಮೂರು ಜನ ಬಿಟ್ಟು ಬೇರೆ ಯಾರೂ ಬಂದಿರುವುದಿಲ್ಲ. ಚಂದ್ರಾಚಾರಿರವರು ಸದರಿ ವಿಲ್ ಗೆ ಸಹಿ ಮಾಡಿಲ್ಲ ಎಂದರೆ ಸರಿ. ಸದರಿ ಚಂದ್ರಾಚಾರಿರವರ ಪಾತ್ರ ಆ ವಿಲ್‌ನಲ್ಲಿ ಇರುವುದಿಲ್ಲ ಹಾಗೂ ಅವರು ಬಂದದ್ದೇ ಇಲ್ಲ ಎಂದರೆ ಸಾಕ್ಷಿ ಅವರು ಬಂದಿದ್ದರು ಎಂದು ನುಡಿಯುತ್ತಾರೆ.

12. ವೇಣುಗೋಪಾಲ್‌ರವರು ನನ್ನ ಕಕ್ಷಿದಾರರಲ್ಲ ಹಾಗೂ ನನ್ನ ಪರಿಚಿತರಲ್ಲ ಎಂದರೆ ಸರಿಯಲ್ಲ. ಸದರಿ ವೇಣುಗೋಪಾಲ್ ಹಾಗೂ ಕೆ.ಎಸ್.ಸುಬ್ಬಾರಾವ್ ರವರು ಆ ದಿನ ಬಂದದ್ದೇ ಇಲ್ಲಹಾಗೂ ಸಹಿ ಮಾಡಿದ್ದೇ ಇಲ್ಲ ಎಂದರೆ ಸರಿಯಲ್ಲ. ಸದರಿ ಕೆ.ಎಸ್.ಸುಬ್ಬಾರಾವ್ ರವರು ವೇಣುಗೋಪಾಲ್ ರವರ ಜೊತೆ ಬರುತ್ತಿದ್ದರಿಂದ ನನಗೆ ಗೊತ್ತಿರುವವರು. ಕೆ.ಎಸ್.ಸುಬ್ಬಾರಾವ್ ರವರು ಆ ಸಮಯದಲ್ಲಿ ಮಾಗಡಿಯಲ್ಲಿ ಸೀನಿಯರ್ ಪತ್ರ ಬರಹಗಾರರಾಗಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಸ್ವತಃ ಅವರು ಬೆಂಗಳೂರಿನಲ್ಲೇ ಇದ್ದರು ಎಂದು ನುಡಿಯುತ್ತಾರೆ.

13. ಈರಮ್ಮನವರು ನನಗೆ ಆರ್ ಟಿ ಸಿ, ಇಂಡೆಕ್ಸ್ ಆಫ್ ಲ್ಯಾಂಡ್, ಸೇಲ್ ಸರ್ಟಿಫಿಕೇಟ್‌ಗಳನ್ನು ತಂದುಕೊಟ್ಟಿದ್ದರು. ಅವರು ಅವರ ಕಾಲಾ ನಂತರ ಸದರಿ ಜಮೀನನ್ನು ಅವರ ಮಗನ ಹೆಂಡತಿಗೆ ಹೋಗುವಂತೆ ದಾಖಲೆ ಮಾಡಿಕೊಡುವಂತೆ ಹೇಳಿದ್ದರು. ಆ ಜಮೀನು ಎರಡು ಆಸ್ತಿಗಳಿಗೆ ಸಂಬಂಧಪಟ್ಟಂತೆ. ಎರಡು ಆಸ್ತಿಗಳ ಬಗ್ಗೆ ಬಾಯಿ ಮಾತಿನಲ್ಲಿ ಕಾನೂನಿನ ಅಭಿಪ್ರಾಯ ಕೇಳಿದ್ದರು. ಅವರ ಕುಟುಂಬದ ಬಗ್ಗೆ ವಿಲ್ ನಾಮೆಗೆ ಎಷ್ಟು ಮಾಹಿತಿ ಬೇಕು ಅಷ್ಟು ಕೊಟ್ಟಿದ್ದರು. ಈರಮ್ಮನವರು ಅವರಿಗೆ ಎಷ್ಟು ಜನ ಮಕ್ಕಳು ಎಂಬುದರ ಬಗ್ಗೆ ಮಾಹಿತಿ ಕೊಟ್ಟಿಲ್ಲ. ಸಾಕ್ಷಿ ಸ್ವತಃ ನಾನು ಅವರನ್ನು ಆ ಬಗ್ಗೆ ಕೇಳಲಿಲ್ಲ. ಅವರು ಆಗ ಯಶವಂತಪುರದಲ್ಲಿ ಅವರ ಮಗನ ಜೊತೆ ವಾಸ ಇದ್ದೇನೆ ಎಂದು ಹೇಳಿದ್ದರು. ಆ ವಿಳಾಸವನ್ನು ವಿಲ್‌ನಲ್ಲಿ ಹೇಳಿದ್ದೇನೆ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ.

14. ಈರಮ್ಮನವರು ಮಗನ ಜೊತೆ ವಾಸವಿರುವುದರಿಂದ ಹಾಗೂ ಅವರೇ ಅವರನ್ನು ಪಾಲನೆ ಪೋಷಣೆ ಮಾಡಿರುವುದರಿಂದ ಆ ಆಸ್ತಿಗಳು ಕಮಲಮ್ಮನವರಿಗೆ ಹೋಗಬೇಕು ಎಂದು ಹೇಳಿದ್ದರು. ಆ ವಿಚಾರವನ್ನು ವಿಲ್ ನಾಮೆಯಲ್ಲಿ ಕೂಡ ಹೇಳಿದ್ದೇನೆ ಎಂದು ಸ್ವತಃ ಹೇಳುತ್ತಾರೆ. ಹೆಬ್ಬೆಟ್ಟು ಗುರುತನ್ನು ದೃಢೀಕರಿಸಿರುವ ಬಗ್ಗೆ ಆ ವಿಲ್‌ನಲ್ಲಿ ಇಂಗ್ಲೀಷ್ ಭಾಷ್ಷೆಯಲ್ಲಿ ಬರೆದಿದ್ದು, ಕನ್ನಡದಲ್ಲಿ ಈರಮ್ಮನವರ ಹೆಬ್ಬೆಟ್ಟು ಎಂಬುದಾಗಿ ಬರೆದಿರುತ್ತೇನೆ. ವಿಲ್ ನಾಮೆಯನ್ನು ಬರೆದುಕೊಟ್ಟ ದಿನವೇ ಅವರ ಹೆಬ್ಬೆಟ್ಟು ಗುರುತನ್ನು ದೃಢೀಕರಿಸಿರುತ್ತೇನೆ. ಹೆಬ್ಬೆಟ್ಟು ಗುರುತನ್ನು ಗುರುತಿಸಿರುವ ಬಗ್ಗೆ ಆ ವಿಲ್ ನಾಮೆಯ ಎರಡನೇ ಪುಟದಲ್ಲಿ ಉಪನೋಂದಾಣಾಧಿಕಾರಿ ಮುಂದೆ ಮಾಡಿರುತ್ತೇನೆ.

15. ಸದರಿ ಈರಮ್ಮನವರು ಆ ಆಸ್ತಿಗಳ ಬಗ್ಗೆ ವ್ಯಾಜ್ಯ ಇದೆ ಎಂದು ನನಗೆ ಹೇಳಿಲ್ಲ. ಅವರು ಚೆನ್ನಾಗಿ ಓಡಾಡುತ್ತಿದ್ದರು. ಅವರ ಮಾನಸೀಕ ಹಾಗೂ ದೈಹಿಕ ಆರೋಗ್ಯ ಚೆನ್ನಾಗಿತ್ತು. ಈರಮ್ಮನವರು ಮೃತಪಟ್ಟ 15 ದಿನಗಳ ನಂತರ ಅವರು ಮೃತಪಟ್ಟಿರುವುದು ನನಗೆ ಗೊತ್ತಾಯಿತು. ಅವರು ಯಾವ ಖಾಯಿಲೆಯಿಂದ ಮೃತಪಟ್ಟರು ಎಂಬುದು ನನಗೆ ಗೊತ್ತಿಲ್ಲ. ಆದರೆ ಅವರಿಗೆ ವಯಸ್ಸಾಗಿತ್ತು. ಆ ವಿಲ್ ನಾಮೆ ನೋಂದಣಿಯಾದ ದಿವಸ ಆರೋಗ್ಯವಾಗಿದ್ದು ಅವರು ಓಡಾಡುತ್ತಿದ್ದರು.

16. ಈರಮ್ಮನವರ ಮಗ ನರಸಿಂಹಯ್ಯರವರ ಪರಿಚಯ ನನಗೆ ಇರಲಿಲ್ಲ. ಅವರ ಇತರ ಮಕ್ಕಳ ಪರಿಚಯ ನನಗೆ ಇರಲಿಲ್ಲ. ಈರಮ್ಮನವರು ಯಾವತ್ತೂ ನನ್ನ ಕಛೇರಿಗೆ ಬಂದಿರಲಿಲ್ಲ ಹಾಗೂ ವಿಲ್ ಬರೆಯಲು ನನಗೆ ಮಾಹಿತಿ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ಈರಮ್ಮನವರು ಯಶವಂತಪುರದಲ್ಲಿ ವಾಸಮಾಡುತ್ತಿರಲಿಲ್ಲ ಹಾಗೂ ಸೋಲೂರಿನಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ. ಈರಮ್ಮನವರು ದಿನಾಂಕಃ 18-06-1994 ಹಾಗೂ 02-07-1994 ರಂದು ವಿಲ್ ಬರೆದುಕೊಡಲು ಮಾನಸಿಕ ಹಾಗೂ ದೈಹಿಕ ಆರೋಗ್ಯ ಇರಲಿಲ್ಲ ಎಂದರೆ ಸರಿಯಲ್ಲ. ಈರಮ್ಮನವರ ಮಗ ನರಸಿಂಹಯ್ಯ ಹಾಗೂ ವಾದಿರವರ ಇಚ್ಛೆಯಂತೆ ದಾವಾ ಸ್ವತ್ತನ್ನು ಕಬಳಿಸಲು ಆ ವಿಲ್ ನಾಮೆಯನ್ನು ಅವರಿಬ್ಬರ ಹೇಳಿಕೆಯಂತೆ ತಯಾರಿಸಿದ್ದೇನೆಂದರೆ ಸರಿಯಲ್ಲ. ಈರಮ್ಮನವರಿಗೆ ಆ ಎರಡು ಸ್ವತ್ತುಗಳ ಮಾಲೀಕತ್ವ, ಒಡೆತನ ಹಾಗೂ ಸ್ವಾಧೀನ ಇರಲಿಲ್ಲ ಎಂದರೆ ಸರಿಯಲ್ಲ.

17. ನಾನು ಕೆ ಎಸ್ ಎಫ್ ಸಿಗೆ ನಾನು ಕಾನೂನು ಸಲಹೆಗಾರನಾಗಿ ಕೆಲವು ಸಮಯ ಇದ್ದೆ. ಸದರಿ ನರಸಿಂಹಯ್ಯ ಕೆ ಎಸ್ ಎಫ್ ಸಿಯಲ್ಲಿ ಕಾರು ಚಾಲಕನಾಗಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿಗೆ ಕಾನೂನು ಬಾಹಿರವಾಗಿ ಅನುಕೂಲ ಮಾಡಿಕೊಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 14 ನೇ ಪ್ರತಿವಾದಿರವರ ಪರ ಶ್ರೀ ಜಿ ಪಿ ವಕೀಲರು ಪಾಟೀ ಸವಾಲು ಅವರ ಪರವಾಗಿ ಇಲ್ಲ ಎಂದು ನಿವೇದಿಸಿರುತ್ತಾರೆ.

ಪಾಟೀ ಸವಾಲುಃ 6 ಮತ್ತು 7ನೇ ಪ್ರತಿವಾದಿ ಪರ ಶ್ರೀ ಎ ಎಸ್ ಎಸ್ ವಕೀಲರಿಂದ

18. ನಿಪಿ 86ರಲ್ಲಿ ನಾನು ಪ್ರತಿಪುಟಗಳಲ್ಲಿ ದೃಢೀಕರಿಸಿರುವ ಹಸ್ತಾಕ್ಷರಕ್ಕೆ ಉಪಯೋಗಿಸಿರುವ ಶಾಯಿಗಳು ಬೇರೆ ಬೇರೆ ಇವೆ ಎಂದರೆ ಸಾಕ್ಷಿ ಒಂದನೇ ಪುಟದ ಹಿಂಭಾಗದಲ್ಲಿರುವ ಹಸ್ತಾಕ್ಷರಕ್ಕೆ ಉಪಯೋಗಿಸಿದ ಶಾಯಿ ಬಿಟ್ಟು ಉಳಿದವುಗಳು ಒಂದೇ ಶಾಯಿಯಲ್ಲಿದ್ದು ಒಂದನೇ ಪುಟದ ಹಿಂಭಾಗದಲ್ಲಿರುವುದನ್ನು ಉಪ ನೊಂದಾಣಾಧಿ ಕಛೇರಿಯಲ್ಲಿ ಮಾಡಿರುವುದು ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ವಿಲ್ ನಾಮೆಯನ್ನು ಬರೆಯುವವರು ವಿಲ್ ನಾಮೆಗೆ ಸಹಿ ಅಥವಾ ಹೆಬ್ಬೆಟ್ಟನ್ನು ಉಪನೋಂದಾಣಾಧಿಕಾರಿ ಮುಂದೆ ಮಾಡುವುದು ಎಂದರೆ ಸಾಕ್ಷಿ ವಿಲ್ ನಾಮೆಯನ್ನು ಬರೆಯುವುದು ಹಾಗೂ ನೋಂದಣಿ ಮಾಡಿಸುವುದು ಒಂದೇ ದಿನ ಆಗಿದ್ದರಿಂದ ಆ ರೀತಿ ಮಾಡಿಸುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಗಳು ಅವರ ಸಹಿ ಮಾಡಲು ಮಾತ್ರ ತಿಳಿದುಕೊಂಡಿದ್ದು ಹೆಸರು ವಿಳಾಸ ಬರೆಯಲು ಗೊತ್ತಿಲ್ಲದೆ ಇದ್ದಾಗ, ಬರಹಗಾರರೇ ಹೆಸರು ವಿಳಾಸ ಬರೆಯುತ್ತಾರೆ ಎಂದರೆ ಸರಿ. ವೇಣುಗೋಪಾಲ್‌ರವರ ತಂದೆ ಹೆಸರು ಹಾಗೂ ವಿಳಾಸ ನಾನು ಬರೆದಿರುವುದಿಲ್ಲ ಎಂದರೆ ಸಾಕ್ಷಿ ವೇಣುಗೋಪಾಲ್‌ರವರೇ ಬರೆದಿರುವುದು ಎಂದು ನುಡಿಯುತ್ತಾರೆ. ಅದನ್ನು ಅವರು ಬರೆದಿದ್ದೇ ಅಲ್ಲ ಎಂದರೆ ಸರಿಯಲ್ಲ. ಅವರ ಸಹಿಯ ಶಾಯಿ ಹಾಗೂ ಆ ಹೆಸರು ವಿಳಾಸದ ಶಾಯಿ ಬೇರೆ ಬೇರೆ ಇದೆ ಎಂದರೆ ಸಾಕ್ಷಿ ವೇಣುಗೋಪಾಲ್ ರವರು ಸಹಿಯನ್ನು ನನ್ನ ಪೆನ್ನಿನಿಂದ ಹಾಗೂ ಆ ಹೆಸರು ವಿಳಾಸವನ್ನು ಸುಬ್ಬಾರಾವ್ ರವರ ಪೆನ್ನಿನಿಂದ ಬರೆದಿರುವುದು ಎಂದು ನುಡಿಯುತ್ತಾರೆ. ಅದನ್ನು ವೇಣುಗೋಪಾಲ್ ರವರು ಬರೆದಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,
ಮಾಗಡಿ.